ಮನೆಯ ಉಣುಗೋಲಿನ ಆಚೆ ನಿಂತು, ಈಚೆ ಅಂಗಳದಲ್ಲಿ ಎಗರೆಗರಿ ಹಾರುತ್ತಾ ಒಂದೇ ಸಮ ಬೊಗಳುತ್ತಿದ್ದ ನಾಯಿಗೆ ಕೈಲಿದ್ದ ಕೋಲು ತೋರಿಸಿ ಹೆದರಿಸುತ್ತಿದ್ದ ವ್ಯಕ್ತಿಯನ್ನು ಕಂಡು ಮೆಟ್ಟಿಲಿಳಿದು ಉಣುಗೋಲಿನ ಹತ್ತಿರ ಬಂದರು ವೆಂಕಪ್ಪಯ್ಯ. ಈ ಬಿರುಬಿಸಿಲಿನ ಮಧ್ಯಾಹ್ನದ ಹೊತ್ತಿಗೆ ಹೀಗೆ ಧುತ್ತನೆ ಮನೆಬಾಗಿಲಿಗೆ ಬಂದವರು ಯಾರಪ್ಪಾ ಎಂದು ಒಂದೆಡೆ ಕುತೂಹಲ. ಇನ್ನೊಂದೆಡೆ ಹೆದರಿಕೆ. ಕೊರೊನಾ ಬಂದಿದ್ದೇ ಬಂದಿದ್ದು, ಒಬ್ಬರ ಮನೆಗೆ ಮತ್ತೊಬ್ಬರು ಸುಖಾಸುಮ್ಮನೆ ಭೇಟಿ ಕೊಡುವ ಪದ್ಧತಿಯೇ ನಿಂತು ಹೋಗಿತ್ತು. ಮನೆಯವರು ಯಾರನ್ನೂ ನಿರೀಕ್ಷಿಸುತ್ತಿರಲಿಲ್ಲ. ಯಾರೂ ಬರುತ್ತಲೂ ಇರಲಿಲ್ಲ. ವೆಂಕಪ್ಪಯ್ಯನಿಗೆ ವಯಸ್ಸಾಗಿದೆ. ಎಂಬತ್ತರ ಹತ್ತಿರದ ವಯಸ್ಸು. ಕಣ್ಣು ಸಮಾ ಕಾಣುವುದಿಲ್ಲ. ಹತ್ತಿರ ಹೋಗಿ ನೋಡುವವರೆಗೆ ಬಂದವರು ಯಾರೆಂದು ಅವರ ಕಲ್ಪನೆಗೂ ನಿಲುಕಿರಲಿಲ್ಲ. ಯಾವಾಗ ಉಣುಗೋಲಿನ ಹತ್ತಿರ ಹೋಗಿ ಬಂದವರ ಮುಖವನ್ನು ಕಿರೀ ನೋಡಿದರೋ ಮಸಕು ಮಸಕಾಗಿ ಗುರುತು ಹತ್ತೇಬಿಟ್ಟಿತು. 'ಅರೇ, ಶೀನಿ...' ಎನ್ನುವ ಉದ್ಗಾರ ಬಾಯಿಂದ ಹೊರಬಿತ್ತು.

"ಮಾರಾಯಾ, ನಿನ್ನ ನಾಯೀನ ಮೊದಲು ಕಟ್ಟು. ಹರ್ಕೊಂಡು ತಿನ್ನೋಕೆ ಬರ್ತಿದೆ..." ಗೆಳೆಯನನ್ನು ಕಂಡಿದ್ದೇ ಊರಗಲ ಮುಖ ಮಾಡಿಕೊಂಡು ಹೇಳಿದರು ಶ್ರೀನಿವಾಸ ರಾಯರು.

"ಬೊಗಳೋ ನಾಯಿ ಕಚ್ಚಲ್ಲ ಅಂತ ಗಾದೆ ಕೇಳಿಲ್ವೇನೋ? ಬಾ... ಬಾ... ಧೈರ್ಯವಾಗಿ ಬಾ" ಒಂದು ಕೈಯಿಂದ ನಾಯಿಯ ಕೊರಳಪಟ್ಟಿ ಹಿಡಿದು, ಇನ್ನೊಂದು ಕೈಯಿಂದ ಉಣುಗೋಲಿನ ಗಳ ಸರಿಸಿ ಮಿತ್ರನನ್ನು ಬರಮಾಡಿಕೊಂಡರು ವೆಂಕಪ್ಪಯ್ಯ. ಇಷ್ಟು ಹೊತ್ತಿಗೆ ಸೊಸೆ ಬಂದು ಮುಂಬಾಗಿಲಲ್ಲಿ ಹಣಿಕಿ ಮುಖ ಸಿಂಡರಿಸಿಕೊಂಡು ಒಳಗೆ ಹೋಗಿದ್ದಳು. "ಮಾವಯ್ಯನ ಫ್ರೆಂಡ್ ಯಾರೋ ಬಂದಿದಾರೆ. ಸಮಯ, ಸಂದರ್ಭ ಬೇಡ್ವಾ?" ಅತ್ತೆಗೆ ವರದಿ ಒಪ್ಪಿಸಿ, ಲೀಲಮ್ಮ ಹೊರಗೆ ಬಂದಿದ್ದೂ ಆಗಿತ್ತು. ಸೊಸೆ ಹೇಳಿದ್ದು ಸುಳ್ಳಲ್ಲ. ಯಾಕಪ್ಪಾ ಈ ಕಾಲದಲ್ಲಿ ಇನ್ನೊಬ್ಬರ ಮನೆಬಾಗಿಲಿಗೆ ಬರಬೇಕು? ಸೆರಗನ್ನು ಮುಂದಕ್ಕೆಳೆದು ಬಿಗೀ ಹೊದ್ದುಕೊಳ್ಳುತ್ತಾ ಹೊರಗೆ ಬಂದವರು ಶ್ರೀನಿವಾಸರಾಯರನ್ನು ನೋಡಿ ಹೊಟ್ಟೆಯೊಳಗೆ ಅಸಮಾಧಾನ ಹೊರಳಾಡಿದರೂ ಮೇಲುಮೇಲಕ್ಕೆ ಅದನ್ನು ತೋರಗೊಡದೆ ನಕ್ಕಂತೆ ಮಾಡಿದರು.

"ಗೊತ್ತಾಯ್ತುನೇ? ಗುರುತು ಸಿಕ್ತಾ?" ವೆಂಕಪ್ಪಯ್ಯನ ದನಿಯಲ್ಲಿ ಸಡಗರ.

"ಸಿಕ್ದೇ ಏನು, ನೋಡಿ ಏಳೆಂಟು ವರ್ಷ ಆಗ್ಹೋಯ್ತೇನೋ? ಆದರೆ, ಗುರುತು ಸಿಕ್ಕದಷ್ಟೇನು ಬದಲಾವಣೆ ಆಗಿಲ್ಲ. ಮೊದಲಿಗಿಂತಾ ಒಂದಿಷ್ಟು ಹಣ್ಣಾಗಿದಾರೆ..."

"ಹಣ್ಣಾಗ್ದೆ? ವಯಸ್ಸು ಯಾರಪ್ಪನ ಮನೇದು?"

ತೀರಾ ಸದರ ತೋರಿಸಲು ಹೋಗದೆ ಪುಸುಕ್ಕನೆ ಒಳಗೆ ಹೋದರು ಲೀಲಮ್ಮ.

"ಯಾರದು ಅತ್ತೆ? ಹೇಳ್ದೆ ಕೇಳ್ದೆ ಬಂದಿದಾರೆ?"

"ಮತ್ಯಾರು, ನೀನೇ ಹೇಳಿದಿಯಲ್ಲ, ನಿಮ್ಮ ಮಾವನ ಹಳೇ ಫ್ರೆಂಡು..."

"ನೋಡಿದ ನೆನಪಾಗ್ತಿಲ್ಲಪ್ಪಾ..."

"ನಿನ್ನ ಮಗಳ ಮದುವೆಗೆ ಬಂದಿದ್ರು ಕಣೇ. ನಿಂಗೆಲ್ಲಿ ನೆನಪಿರುತ್ತೆ ಬಿಡು..."

"ಎಲ್ಲಿಂದ ಬಂದಿದ್ದಂತೋ?"